# ಹೊಸ ವರ್ಷದ ಪಾಠ

–ಅರುಣ್‌ಜೇಟ್ಲಿ
ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

2014ರಲ್ಲಿ ಭಾರತದರಾಜಕೀಯ ವ್ಯವಸ್ಥೆ ಹಾಗೂ ಆಡಳಿತದಲ್ಲಿ ಗಣನೀಯ ಬದಲಾವಣೆಕಾಣಬಹುದೇ? ಭಾರತೀಯರ ಆಕಾಂಕ್ಷೆಗಳು ಮೇಲ್ಮಟ್ಟಕ್ಕೆಏರಿವೆ. ಕೇವಲ ಮಧ್ಯಮ ವರ್ಗದವರು ಪ್ರಬಲ ಅಭಿಪ್ರಾಯ ಮೂಡಿಸುವ ವರ್ಗವಾಗಿ ಉಳಿದಿಲ್ಲ. ಇವರೊಂದಿಗೆ ವ್ಯಾಪಕ ಅಭಿಲಾಶೆಗಳನ್ನು ಹೊಂದಿದ ಮತ್ತೊಂದು ವರ್ಗರೂಪುಗೊಂಡಿದ್ದು, ಅವರ ಆಕಾಂಕ್ಷೆಗಳು ಸಂಪೂರ್ಣ ಭಿನ್ನವಾಗಿವೆ. ಭಾರತೀಯರಾಜಕಾರಣ, ಸಾರ್ವಜನಿಕಜೀವನದಲ್ಲಿಇರುವವರು ಮತ್ತು ಆಡಳಿತ ವೈಖರಿಯಕುರಿತು ಈ ವರ್ಗಕಟುವಾದ ವಿಶ್ಲೇಷಾತ್ಮಕತೀರ್ಪು ನೀಡುತ್ತದೆ. ಸರ್ಕಾರದ ಪರ ಮತ ಹಾಕುತ್ತದೆ ಮತ್ತುಜನಪ್ರಿಯ ಆಕಾಂಕ್ಷೆಗಳನ್ನು ಪೂರೈಸದ ಸರ್ಕಾರವನ್ನು ಬೀಳಿಸುವ ಸಮರ್ಥ್ಯ ಹೊಂದಿದೆ.

ಇತ್ತೀಚೆಗೆರಾಜ್ಯ ವಿಧಾನಸಭೆಗೆಆಯೋಜಿಸಲಾದ ನಾಲ್ಕು ಚುನಾವಣೆಗಳ ಫಲಿತಾಂಶಗಳು ನನ್ನ ಈ ಆಲೋಚನೆಯನ್ನು ಸಮರ್ಥಿಸುತ್ತದೆ.ಮಧ್ಯ ಪ್ರದೇಶದ ಮುಖ್ಯ ಮಂತ್ರಿಗಳಾದ ಶ್ರೀ ಶಿವರಾಜ್ ಸಿಂಗ್ ಚೌಹಾಣ್‌ಅವರುತಮ್ಮ ಸಾಧನೆ, ವಿಶೇಷವಾಗಿ ವೈಯಕ್ತಿಕ ವಿಶ್ವಾಸಾರ್ಹತೆಯ ಬಲದಿಂದ ಮೂರನೆ ಬಾರಿ ಬಾಜಪವನ್ನುಅಧಿಕಾರಕ್ಕೆತರುವಲ್ಲಿ ಯಶಸ್ವಿಯಾಗಿದ್ದಾರೆ.ಯಾವುದೇಒಂದು ಕಾಲಮಾನದಲ್ಲಿಅವರಜನಪ್ರಿಯತೆಯು ಭಾಜಪಜನಪ್ರಿಯತೆ ಮಟ್ಟವನ್ನು ಮೀರಿತ್ತು.ಡಾ.ರಮಣ್ ಸಿಂಗ್ ಅವರ ವೈಯಕ್ತಿಕ ವಿಶ್ವಾಸಾರ್ಹತೆಜೊತೆಗೆ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿಅವರು ರೂಪಿಸಿದ ಯಶಸ್ವಿ ವ್ಯವಸ್ಥೆಯಿಂದಾಗಿ ಭಾಜಪಗೆಲ್ಲಲು ಸಾಧ್ಯವಾಯಿತು.ಮುಖ್ಯಮಂತ್ರಿಗಳು ಇಬ್ಬರೂಉತ್ತಮಜನಸೇವೆಗೆ ಮಾದರಿಯಾದರು.ರಾಜಸ್ಥಾನದಲ್ಲಿ ಸಚಿವರು ಮತ್ತು ಶಾಸಕರದುರ್ನಡತೆ ಆರೋಪಗಳಿಂದ ಕಾಂಗ್ರೆಸ್ ಪಕ್ಷದ ಸರ್ಕಾರಕ್ಕೆ ಮುಖಭಂಗವಾಯಿತು.ಚುನಾವಣೆಯಲ್ಲಿ ಮತದಾರರು ನೀಡಿದ ಸ್ಪಷ್ಟ ಸಂದೇಶವೆಂದರೆ– ಸಾಮಾಜಿಕ ಹಾಗೂ ರಾಜಕೀಯ ಸಂಯೋಜನೆಗಳು ಸೇರಿದಂತೆಅನ್ಯ ಮಾನದಂಡಗಳು ಚುನಾವಣೆಯಲ್ಲಿ ಮುಖ್ಯವಾಗಬಹುದು, ಆದರೆಎಲ್ಲಕ್ಕಿಂತ ಮಿಗಿಲಾಗಿ ವಿಶ್ವಾಸಾರ್ಹತೆಗೆ ಮತದಾರರು ಹೆಚ್ಚಿನಒತ್ತು ನೀಡುತ್ತಾರೆ.

ದೆಹಲಿಯಲ್ಲಿ, ಕಾಂಗ್ರೆಸ್ ಸರ್ಕಾರ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿತ್ತು. ಕಳೆದ ಮೂರು ವರ್ಷಗಳಲ್ಲಿ ಭ್ರಷ್ಟಾಚಾರ ವಿರೋಧಿ ಹೋರಾಟಕ್ಕೆದೆಹಲಿ ಕೇಂದ್ರ ಬಿಂದುವಾಗಿತ್ತು. ಈ ವಿಚಾರದಲ್ಲಿಕಾಂಗ್ರೆಸ್ ವಿಶ್ವಾಸ ಕಳೆದುಕೊಂಡಿದೆ. ಆದ್ದರಿಂದಲೇಚುನಾವಣಾ ಹಣಾಹಣಿಯಲ್ಲಿ ಹೀನಾಯ ಸೋಲು ಅನುಭವಿಸಿದೆ.ಸಾಧಾರಣವಾಗಿ ಭಾಜಪಎಲ್ಲಾ ಚುನಾವಣೆಗಳನ್ನು ಗೆಲ್ಲಬೇಕಿತ್ತು.ಆದರೆ ಮತದಾರರಒಂದು ವರ್ಗ, ಹೊಸ ಪರ್ಯಾಯ ಶಕ್ತಿಗೆ ಪ್ರಯೋಗಿಕ ಅವಕಾಶ ಕಲ್ಪಿಸಿಕೊಡುವ ಆಲೋಚನೆ ಮಾಡಿದೆ.ಸಾಂಪ್ರದಾಯಿಕರಾಜಕಾರಣದ ಕಳಪೆ ಗುಣಮಟ್ಟದ ವಿರುದ್ಧ ಮೌನ ಪ್ರತಿಭಟನೆ ನಡೆಸಿರುವ ಮತದಾರರುಆಮ್‌ಆದ್ಮಿ ಪಾರ್ಟಿಗೆ ಸಾಕಷ್ಟು ಮತಹಾಕಿದ್ದಾರೆ.ಮತಗಳು ಮತ್ತು ಸೀಟುಗಳ ಸಂಖ್ಯೆಯಲ್ಲಿ ಭಾಜಪ ಪ್ರಮುಖ ಪಾರ್ಟಿಯಾಗಿ

ಹೊರಹೊಮ್ಮಿದ್ದರೂದೆಹಲಿ ಚುನಾವಣೆ ವಿಚಾರದಲ್ಲಿ ಭಾಜಪಆತ್ಮಾವಲೋಕನ ಮಾಡಿಕೊಳ್ಳಲಿದೆ.ಪಕ್ಷದರಾಜ್ಯ ನಾಯಕರು ಮತ್ತು ಪ್ರತಿಯೊಬ್ಬ ಅಭ್ಯರ್ಥಿಗಳು ಜನಪ್ರಿಯ ಆಕಾಂಕ್ಷೆಗಳಿಗೆ ಸರಿಸಾಟಿಯಾಗಿಕಾರ್ಯವಹಿಸಬೇಕಿದೆ.ದೆಹಲಿಯಲ್ಲಿಡಾ.ಹರ್ಷ್‌ವರ್ದನ್‌ಅವರನ್ನು ಪಕ್ಷದ ಪ್ರಶ್ನಾತೀತ ನಾಯಕರಾಗಿಆಯ್ಕೆ ಮಾಡಿರುವುದು ಸರಿಯಾದ ನಿರ್ಣಯವಾಗಿದೆ. ಪಕ್ಷದಚುನಾವಣಾ ವೆಚ್ಚಕ್ಕಾಗಿ ಕಿರುದೇಣಿಗೆ ಸಂಗ್ರಹಿಸಲು ರಾಷ್ಟ್ರಮಟ್ಟದಲ್ಲಿ 10 ಕೋಟಿ ಮನೆಗಳಿಗೆ ಭೇಟಿ ನೀಡಲು ಭಾಜಪ ನಿರ್ಧರಿಸಿದೆ.ಆದರೆದೆಹಲಿಯಲ್ಲಿಜನರ ವಿಶ್ವಾಸಾರ್ಹತೆ ಬಲಪಡಿಸಲುದೆಹಲಿಯ ನಮ್ಮ ಪಕ್ಷಇನ್ನಷ್ಟು ಪ್ರಯತ್ನಗಳನ್ನು ಮಾಡುವಅಗತ್ಯವಿದೆ.

ವಿಶ್ವಾಸಾರ್ಹತೆಯೇ ಪ್ರಮುಖ ವಿಚಾರವೆಂಬ ಹೊಸ ವರ್ಷದರಾಜಕೀಯ ಸಂದೇಶವಾಗಿದ್ದರೆ, ಕಾಂಗ್ರೆಸ್‌ಈವರೆಗೂತನ್ನ ತಪ್ಪುಗಳಿಂದ ಪಾಠಕಲಿತಂತಿಲ್ಲ. ನಾಲ್ಕು ರಾಜ್ಯಗಳಲ್ಲೂ ಹೀನಾಯ ಸೋಲು ಅನುಭವಿಸಿದ ನಂತರವೂ, ಹೊಸ ವರ್ಷದಲ್ಲಿ ಪುನಃ ಎರಡು ಪ್ರಕರಣಗಳ ಮೇಲೆ ಮುಸುಕು ಹಾಕುವ ಪ್ರಯತ್ನ ನಡೆಸಿದೆ.ಆದರ್ಶ್ ಹಗರಣದತನಿಖೆ ನಡೆಸಿದ ಆಯೋಗವುಕಾಂಗ್ರೆಸ್ ಪಕ್ಷದ ಪ್ರಮುಖರ ಹೆಸರುಗಳನ್ನು ಉಲ್ಲೇಖಿಸಿದ್ದರೂ, ಮಹಾರಾಷ್ಟ್ರ ಸರ್ಕಾರ ವಿಚಾರಣಾಆಯೋಗದ ವರದಿಯನ್ನು ತಿರಸ್ಕರಿಸಿದೆ.ಇಂತಹ ಮರೆಮಾಚುವ ಪ್ರಯತ್ನಗಳು ಸಾರ್ವಜನಿಕಅಭಿಪ್ರಾಯ ಮತ್ತು ಸ್ವಚ್ಛ ಹಾಗೂ ವಿಶ್ವಾಸಾರ್ಹರಾಜಕಾರಣದ ಧ್ಯೇಯಗಳಿಗೆ ವಿರುದ್ಧವಾಗಿದೆ. ಹಿಮಾಚಲ ಪ್ರದೇಶದ ಮುಖ್ಯ ಮಂತ್ರಿ ಶ್ರೀ ವೀರಭದ್ರ ಸಿಂಗ್ ಅವರ ವಿರುದ್ಧಅನುಚಿತ ವರ್ತನೆ, ಭ್ರಷ್ಟಾಚಾರ, ದುರ್ಮಾರ್ಗದಿಂದ ಪ್ರತಿಫಲ ಗಳಿಸಿದ ಮತ್ತು ಹಿತಾಸಕ್ತಿಗೆ ವಿರುದ್ಧವಾಗಿ ವರ್ತಿಸಿದ ಆರೋಪಗಳಿದ್ದರೂ, ಕಳಂಕಿತ ಮುಖ್ಯ ಮಂತ್ರಿಯನ್ನು ಬೆಂಬಲಿಸಿ ಪ್ರತಿಭಟನೆ ನಡೆಸುವ ನಾಚಿಕೆಗೇಡಿನ ನಿರ್ಧಾರವನ್ನುಕಾಂಗ್ರೆಸ್ ಪಕ್ಷತೆಗೆದುಕೊಂಡಿದೆ.ತತ್ವ ಸಿದ್ಧಾಂತದ ನಿಗ್ರಹದಿಂದ ಸಾರ್ವಜನಿಕರ ಮತ್ತಷ್ಟುಕ್ರೋಧಕ್ಕೆತುತ್ತಾಗುವಕೃತ್ಯಇದಾಗಿದೆ.

ವಿಶ್ವಾಸಾರ್ಹತೆಯರಾಜಕಾರಣ ಬೇಕೆಂಬ ಸ್ಪಷ್ಟಜನಾದೇಶವಿದೆ.ಈ ಆಕಾಂಕ್ಷೆಗಳನ್ನು ಕಡೆಗಣಿಸಿದವರು ತಮ್ಮರಾಜಕೀಯ ಅಸ್ತಿತ್ವಕ್ಕೆ ಸಂಚಕಾರ ತಂದುಕೊಳ್ಳಬೇಕಾಗುತ್ತದೆ.

*****